**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 737/2021**
**ಸಿ.ಡಬ್ಲ್ಯೂ–3**
**ಪಿ.ಡಬ್ಲೂ –3**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಲಜಾಕ್ಷಿ |
| ಗಂಡನ ಹೆಸರು | : | ಬಾಲಚಂದ್ರ ಎಂ.ಎನ್. |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಸ್ಟಾಫ್ ನರ್ಸ್ , ಪ್ರಾಥಮಿಕ ಆರೋಗ್ಯ ಕೇಂದ್ರ, ಅರಂತೋಡು. |
| ವಾಸ | : | ಪೇರಾಲು ಮನೆ, ಮಂಡೆಕೋಲು ಗ್ರಾಮ, ಸುಳ್ಯ ತಾಲೂಕು. |
| ದಿನಾಂಕ | : | 18–11–2025. |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಸುಮಾರು 19 ವರ್ಷಗಳಿಂದ ಕೊಲ್ಲಮೊಗರು ಪ್ರಾಥಮಿಕ ಆರೋಗ್ಯ ಕೇಂದ್ರದ ಉಪಕೇಂದ್ರವಾದ ದೇವಚಳ್ಳದಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಸಮಯದಲ್ಲಿ ಕೋವಿಡ್ ಕಾಲವಾಗಿದ್ದು, ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರರ ಆದೇಶದ ಮೇರೆಗೆ ಗ್ರಾಮ ಪಂಚಾಯತ್ ದೇವಚಳ್ಳದಲ್ಲಿ ಕೋವಿಡ್ ಸೋಂಕು ಹರಡುವುದನ್ನು ತಡೆಯುವುದರ ಕುರಿತು ಅದರ ಮಾಹಿತಿಗಾಗಿ ಒಂದು ಟಾಸ್ಕ್ ಫೋರ್ಸ್ ಸಮಿತಿಯನ್ನು ರಚನೆ ಮಾಡಿದ್ದು, ಸದರಿ ಸಮಿತಿಯಲ್ಲಿ ನಾನು, ಚಾ.ಸಾ.1, ಚಾ.ಸಾ.2, ಚಾ.ಸಾ.4 ರಿಂದ ಚಾ.ಸಾ.6 ರವರು ಒಳಗೊಂಡಿರುತ್ತೇವೆ.

ಸಾಕ್ಷಿಯ ಸಹಿ                    ನ್ಯಾಯಾಧೀಶರ ಸಹಿ

ದಿನಾಂಕ 09-06-2021 ರಂದು ನನಗೆ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಆರೋಪಿಗೆ ಕೋವಿಡ್ ಪಾಸಿಟಿವ್ ಬಂದ ಬಗ್ಗೆ ಮಾಹಿತಿ ಬಂದಿದ್ದು, ಸದರಿ ಆರೋಪಿಯನ್ನು ನಮ್ಮ ಟಾಸ್ಕ್ ಫೋರ್ಸ್ ಸಮಿತಿಯವರು ಹೋಗಿ ಐಸೋಲೇಶನ್ ಮಾಡಬೇಕೆಂದು ನಾವು ಆರೋಪಿಯ ಮನೆಗೆ ಹೋಗಿ , ಆರೋಪಿಗೆ ಐಸೋಲೇಶನ್ ಬಗ್ಗೆ ಮಾಹಿತಿಯನ್ನು ನೀಡಿರುತ್ತೇವೆ. ಕೋವಿಡ್ ಹರಡಿದ ಕಾರಣಕ್ಕೆ ಆರೋಪಿಯನ್ನು ಪ್ರತ್ಯೇಕ ಕಾಳಜಿ ಕೇಂದ್ರದಲ್ಲಿ ಅಥವಾ ಐಸೋಲೇಶನ್ ನಲ್ಲಿ ಇಡಬೇಕಾಗಿದ್ದರಿಂದ, ಆಗ ಆರೋಪಿಯು ನಮ್ಮಲ್ಲಿ ತನಗೆ ಪ್ರತ್ಯೇಕವಾದ ಮನೆ ಇದೆ, ತಾನು ಅಲ್ಲಿ ಪ್ರತ್ಯೇಕವಾಗಿರುತ್ತೇನೆ ಎಂದು ಹೇಳಿರುತ್ತಾರೆ. ಅದರಂತೆ ನಾವು ಆರೋಪಿಯು ಇರುವಂತಹ ಪ್ರತ್ಯೇಕ ಮನೆಗೆ ಹೋಗಿ, ಆರೋಪಿಯಲ್ಲಿ ಸದರಿ ಮನೆಯಲ್ಲಿ ಹೋಂ ಐಸೋಲೇಶನ್ ನಲ್ಲಿ ಇರುವಂತೆ ಆರೋಪಿಗೆ ಅನುಮತಿಯನ್ನು ನೀಡಿರುತ್ತೇವೆ. ನಾವು ದಿನಾಂಕ 09-06-2021 ರಿಂದ ದಿನಾಂಕ 13-06-2021 ರವರೆಗೆ ಆರೋಪಿಯು ಪ್ರತ್ಯೇಕ ಮನೆಯಲ್ಲಿ ಐಸೋಲೇಶನ್ ನಲ್ಲಿ ಇದ್ದು, ದಿನಾಂಕ 14-06-2021 ರಂದು ನಾವು ಸದರಿ ಮನೆಗೆ ಹೋದಾಗ, ಅಲ್ಲಿ ಆರೋಪಿಯು ಇರಲಿಲ್ಲ.

ಆರೋಪಿಯು ತನ್ನ ಸ್ವಂತ ವಾಹನದಲ್ಲಿ ಬಾಳೆಗುಡ್ಡೆಗೆ ಹೋಗಿರುತ್ತಾರೆ. ನಂತರ ನಾವು ಆರೋಪಿಗೆ ನೀವು ಅದೇ ಪ್ರತ್ಯೇಕವಾದ ಮನೆಯಲ್ಲಿರಬೇಕು ಎಂದು ತಿಳಿ ಹೇಳಿದಾಗ ಅದಕ್ಕೆ ಅವರು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ದಿನಾಂಕ 15-06-2021 ರಂದು ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಿದ್ದು, ಸದರಿ ಸಭೆಯಲ್ಲಿ ಆರೋಪಿಯು ಐಸೋಲೇಶನ್ ನಲ್ಲಿದ್ದ ಮನೆಯಿಂದ ಹೊರಗೆ ಹೋದ ವಿಷಯವನ್ನು ಪ್ರಸ್ತಾಪಿಸಿದಾಗ, ಸದರಿ ಸಭೆಯಲ್ಲಿ ಆರೋಪಿಯು ಇದ್ದ ಮನೆಯಿಂದ ಕಾಳಜಿ ಕೇಂದ್ರಕ್ಕೆ ವರ್ಗಾಯಿಸಬೇಕೆಂದು ತೀರ್ಮಾನವಾಗಿರುತ್ತದೆ.

ಆರೋಪಿಯನ್ನು ನಾವು ಕಾಳಜಿ ಕೇಂದ್ರಕ್ಕೆ ವರ್ಗಾಯಿಸುವ ಸಮಯ ಆರೋಪಿಯ ಮನೆಯ ಬಳಿ ಟಾಸ್ಕ್ ಫೋರ್ಸ್ ಸಮಿತಿಯವರು ಆ್ಯಂಬುಲೆನ್ಸನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾವೆಲ್ಲರೂ ನಮ್ಮದೇ ವಾಹನದಲ್ಲಿ ಅಲ್ಲಿಗೆ ಹೋಗಿರುತ್ತೇವೆ. ನಾವು ಅಲ್ಲಿಗೆ ಹೋದ ಸಮಯದಲ್ಲಿ ಆರೋಪಿಯು ಐಸೋಲೇಶನ್ ಗೆಂದು ಇದ್ದ ಮನೆಯಲ್ಲಿ ಇರದೇ ಆರೋಪಿಯು ವಾಸದ ಮನೆಯ ಹೊರಗಡೆ ಇದ್ದದ್ದನ್ನು ನಾವು ನೋಡಿರುತ್ತೇವೆ. ಆರೋಪಿಯು ಐಸೋಲೇಶನ್ ಮನೆಯಿಂದ ಹೊರ ಬಂದಿರುವ ಕಾರಣ ನಿಮ್ಮನ್ನು ಕಾಳಜಿ ಕೋವಿಡ್ ಸೆಂಟರ್ ಗೆ ವರ್ಗಾಯಿಸುವ ಕುರಿತು ನಾವು ಬಂದಿರುವ ಬಗ್ಗೆ ಆರೋಪಿಯಲ್ಲಿ ನಾನು ವಿಷಯವನ್ನು ತಿಳಿಸಿರುತ್ತೇನೆ. ಆಗ ಆರೋಪಿಯು ಕಾಳಜಿ ಕೇಂದ್ರಕ್ಕೆ ಬರಲು ಒಪ್ಪಿಕೊಂಡಿದ್ದು, ಆರೋಪಿಯು ಆ್ಯಂಬುಲೆನ್ಸ್ ಬಳಿ ಬಂದಾಗ ಅಲ್ಲಿಂದ ಅವರು ತಪ್ಪಿಸಿಕೊಂಡಿರುತ್ತಾರೆ. ನಂತರ ಆರೋಪಿಯನ್ನು ನಾವು ಸುತ್ತ-ಮುತ್ತ ಹುಡುಕಾಡಿದಾಗ, ನಮಗೆ ಅವರ ಬಗ್ಗೆ ಮಾಹಿತಿ ದೊರೆತಿರುವುದಿಲ್ಲ. ನಂತರ ಸಂಜೆ 4.30 ಗಂಟೆಗೆ ಆರೋಪಿಯು ಗುತ್ತಿಗಾರು ಗ್ರಾಮದ ಉರುಂಬಿ ಎಂಬ ಜಾಗಕ್ಕೆ

ಸಾಕ್ಷಿಯ ಸಹಿ                    ನ್ಯಾಯಾಧೀಶರ ಸಹಿ

ಹೋಗಿರುತ್ತಾರೆಂದು ಟಾಸ್ಕ್ ಫೋರ್ಸ್ ಸಮಿತಿಯವರು ಹಾಗೂ ಗ್ರಾಮದವರು ನನ್ನಲ್ಲಿ ಹೇಳಿರುತ್ತಾರೆ. ನಂತರ ನಾವು ಆರೋಪಿಯನ್ನು ಸದರಿ ಸ್ಥಳದಿಂದ ಕಾಳಜಿ ಕೇಂದ್ರಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಆರೋಪಿಯು ಮಾಡಿದ ಈ ಕೃತ್ಯದಿಂದ ನಮ್ಮ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ.

ಆರೋಪಿಯು ನನಗೆ ಪರಿಚಯಸ್ಥರಾಗಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಿಪಿ-6 ಹಾಗೂ 7 ನ್ನು ನಾನು ನೋಡಿ ಗುರುತಿಸಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ಟಾಸ್ಕ್ ಫೋರ್ಸ್ ಸಮಿತಿಯಿಂದ ಆರೋಪಿಯ ಮನೆಗೆ ನಾವು ಹೋದ ಸಮಯದಲ್ಲಿ ಚಾ.ಸಾ.1 ರವರನ್ನು ಆರೋಪಿಯು ತನ್ನ ಕೈಯಿಂದ ದೂಡಿ ಹಾಕಿ ಆರೋಪಿಯು ಓಡಿ ಹೋಗಿರುತ್ತಾರೆಂದರೆ ನನಗೆ ಆ ಬಗ್ಗೆ ತಿಳಿದಿರುವುದಿಲ್ಲ. ಆರೋಪಿಯು ಚಾ.ಸಾ.1 ರವರಿಗೆ ಜೀವ ಬೆದರಿಕೆಯನ್ನು ಒಡ್ಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನಗೆ ಎಲ್ಲಾ ವಿಷಯಗಳು ತಿಳಿದಿದ್ದರೂ ಸಹ ನಾನು ತಿಳಿದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಕೆ.ಎಂ.  ವಕೀಲರಿಂದಃ**

ನಾನು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ staff nurse ಎಂದು ಹೇಳಲು ತನಿಖಾಧಿಕಾರಿಯವರಿಗೆ ನಾನು ದಾಖಲೆಯನ್ನು ನೀಡಿರುವುದಿಲ್ಲ. ಕೋವಿಡ್ -19 ರ ನಿಯಮಗಳ ಬಗ್ಗೆ ಜಿಲ್ಲಾಧಿಕಾರಿಯವರಿಂದ ಯಾವ ದಿನಾಂಕದಂದು ಆದೇಶ ಬಂದಿರುತ್ತದೆ ಎಂದು ನನಗೆ ಈಗ ಅದರ ಬಗ್ಗೆ ನೆನಪಿರುವುದಿಲ್ಲ.

ಟಾಸ್ಕ್ ಫೋರ್ಸ್ ಸಮಿತಿಯನ್ನು ಪಂಚಾಯತಿಯವರು ಮಾಡಿದ್ದು, ನಮ್ಮನ್ನು ಅದರಲ್ಲಿ ಪಂಚಾಯತಿಯವರು ನೇಮಿಸಿರುತ್ತಾರೆ. ಟಾಸ್ಕ್ ಫೋರ್ಸ್ ಸಮಿತಿಯ ಲಿಸ್ಟನ್ನು ತಾಲೂಕು ಆರೋಗ್ಯಾಧಿಕಾರಿಯವರ ಕಚೇರಿಯಿಂದ, ಪಂಚಾಯತಿಗೆ ಬಂದು, ಅಲ್ಲಿಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿರುತ್ತದೆ. ಸದರಿ ಟಾಸ್ಕ್ ಫೋರ್ಸ್ ಸಮಿತಿಯಲ್ಲಿ ದೇವಚಳ್ಳ ಗ್ರಾಮದಲ್ಲಿ ನಿಖರವಾಗಿ ನಾವು ಎಷ್ಟು ಮಂದಿ ಇದ್ದೆವು ಎಂದು ನನಗೆ ಹೇಳಲು ಬರುವುದಿಲ್ಲ.

ಈ ಪ್ರಕರಣದ ಘಟನೆ ಆಗುವ ದಿವಸ ನಾನು ದೇವಚಳ್ಳ ಹಾಗೂ ಮಡಪ್ಪಾಡಿ ಗ್ರಾಮದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಿಖರವಾಗಿ ಈ ಪ್ರಕರಣದ ಘಟನೆ ಆಗುವ ದಿನದಂದು ಮಡಪ್ಪಾಡಿ ಗ್ರಾಮದಲ್ಲಿ ಡ್ಯೂಟಿಯಲ್ಲಿದ್ದು, ಟಾಸ್ಕ್ ಫೋರ್ಸ್ ಸಮಿತಿಯವರ ಕೋರಿಕೆ ಮೇರೆಗೆ ದೇವಚಳ್ಳ ಗ್ರಾಮಕ್ಕೆ ಬಂದಿರುತ್ತೇನೆ.

ಆರೋಪಿಯ ಮನೆಗೆ ನಾನು ಒಟ್ಟು ಮೂರು ಬಾರಿ ಭೇಟಿ ನೀಡಿರುತ್ತೇನೆ. ನಿಖರವಾಗಿ ನಾನು ದಿನಾಂಕ 10-06-2021, 11-06-2021 ಹಾಗೂ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

10-11-2021 ರಂದು ಆರೋಪಿಯ ಮನೆಗೆ ಹೋಗಿರುತ್ತೇನೆ. ಈ ಮೂರು ದಿನಾಂಕಗಳಂದು ಆರೋಪಿಯ ಮನೆಗೆ ಭೇಟಿ ನೀಡಿದ ಹೊರತು ಬೇರಾವ ದಿನದಂದು ಆರೋಪಿಯ ಮನೆಗೆ ಹೋಗಿರುವುದಿಲ್ಲ. ನಾನು ಈ ರೀತಿ ಆರೋಪಿಯ ಮನೆಗೆ ಹೋದಾಗ ಆರೋಪಿಯು ಹೋಂ ಐಸೋಲೇಶನ್ ನಲ್ಲಿ ಇದ್ದರು.

ದಿನಾಂಕ 14-06-2021 ರಂದು ಆರೋಪಿಯು ಬಾಳೆಗುಡ್ಡೆಗೆ ಹೋಗುವ ದಾರಿಯಲ್ಲಿ, ಆರೋಪಿಯ ಜಮೀನಿಗೆ ಹೋಗುವ ದಾರಿಯಲ್ಲಿ ತಿರುಗಾಡುತ್ತಿದ್ದುದ್ದನ್ನು ನಾನು ನೋಡಿರುತ್ತೇನೆ.

ನಿಪಿ-6 ಹಾಗೂ 7 ರ ಫೊಟೋದಲ್ಲಿ ಸ್ಪಷ್ಟವಾಗಿ ವ್ಯಕ್ತಿಯ ಚಿತ್ರಣ ಕಾಣುತ್ತದೆ. ನಿಪಿ-6 ಹಾಗೂ 7 ರ ಫೊಟೋವನ್ನು ಆರೋಪಿಯ ಜಮೀನಿನ ಹತ್ತಿರ ಬಾಳೆಗುಡ್ಡೆ ಎಂಬಲ್ಲಿ ತೆಗೆದದ್ದಾಗಿರುತ್ತದೆ. ಸದರಿ ಫೊಟೋವನ್ನು ಪಿ.ಡಿ.ಓ. ರವರು ತೆಗೆದಿರುತ್ತಾರೆ.

ನಾನು ಕೊರೋನಾ ಸಮಯದಲ್ಲಿ ಕರ್ತವ್ಯದಲ್ಲಿದ್ದೆ ಎಂಬ ಕುರಿತು ನಾನು ನನ್ನ ದಿನಚರಿ ಪುಸ್ತಕವನ್ನು ನಿರ್ವಹಿಸಿರುತ್ತೇನೆ. ಸದರಿ ದಿನಚರಿ ಪುಸ್ತಕವನ್ನು ನಾನು ಹಾಜರುಪಡಿಸಿರುತ್ತೇನೋ-ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ.

ಟಾಸ್ಕ್ ಫೋರ್ಸ್ ಸಮಿತಿಯ ಸಭೆಯು ದಿನಾಂಕ 15-06-2021 ರಂದು ಬೆಳಗ್ಗೆ 11.00 ಗಂಟೆಗೆ ನಡೆದಿರುತ್ತದೆ. ಆರೋಪಿಯ ಮನೆಗೆ ನಾವು ಬೆಳಗ್ಗೆ 11.30 ಗಂಟೆಗೆ ಹೋಗಿರುತ್ತೇವೆ. ಆರೋಪಿಯ ಮನೆಗೆ ಹೋದಾಗ ಆರೋಪಿಯು ಮನೆಯಂಗಳದಲ್ಲಿ ಇದ್ದರು.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನಾವು ಆರೋಪಿಯ ಹೋಂ ಐಸೋಲೇಶನ್ ಇರುವ ತೋಟದ ಮನೆಗೆ ಸಂಜೆ 4.30 ಗಂಟೆಗೆ ಟಾಸ್ಕ್ ಫೋರ್ಸ್ ಸಮಿತಿಯವರೆಲ್ಲರೂ ಒಟ್ಟಾಗಿ ಹೋಗಿರುತ್ತೇವೆ. ಸದರಿ ತೋಟದ ಮನೆಯ ನಂಬ್ರ ನನಗೆ ತಿಳಿದಿರುವುದಿಲ್ಲ. ನಾನು ಸುಳ್ಳು ಪ್ರಕರಣಕ್ಕೆ ಅನುಗುಣವಾಗಿ ನಮ್ಮ ಮೇಲಧಿಕಾರಿಯವರ ಒತ್ತಾಯಕ್ಕೆ ಮಣಿದು, ಅಂಕಿ-ಅಂಶ ಭರ್ತಿಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯ ವಾಹನದ ಸಂಖ್ಯೆಯು ನನಗೆ ತಿಳಿದಿರುವುದಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ